ಪುಸ್ತಕಗಳನ್ನು ತೊಗೊಂಡು ಓದುತ್ತಿದ್ದೆವು. ಜೊತೆಗೆ, ಮಹಿಳಾ ಸಮಾಜದಲ್ಲಿ ಬಹಳ ಒಳ್ಳೆಯ ಲೈಬ್ರರಿ ಇತ್ತು. ಅಲ್ಲಿ ನಮ್ಮಮ್ಮ ಸೆಕ್ರೆಟರಿ ಆಗಿದ್ದರು. ಕನ್ನಡದಲ್ಲಿ ಹೊಸ ಪುಸ್ತಕಗಳು ಬಂದ ತಕ್ಷಣ ಅಲ್ಲಿಗೆ ತರಿಸುತ್ತಿದ್ದರು. ಪ್ರತಿ ಶನಿವಾರ ಹೊಸ ಪುಸ್ತಕ ಕೊಡೋರು. ಆಗ ಹೊಡೆದಾಟ ಆಗೋಷ್ಟು ಗಲಾಟೆ ಆಗೋದು. ತ್ರಿವೇಣಿ, ಎಂ.ಕೆ. ಇಂದಿರಾ ಇಂಥವರ ಪುಸ್ತಕಗಳು ಬಂದಾಗ ಕ್ಯೂ ನಿಂತು ಸದಸ್ಯರು ಪುಸ್ತಕ ತೊಗೊಂಡು ಹೋಗಿ ಓದೋರು. ಆಮೇಲೆ ಆ ಪುಸ್ತಕಗಳ ಬಗ್ಗೆ ಅಲ್ಲೂ ಚರ್ಚೆ ಮಾಡ್ತಿದ್ವಿ. ಮನೆಯಲ್ಲೂ ಚರ್ಚೆ ಮಾಡ್ತಿದ್ವಿ.

ಕಾಲೇಜಲ್ಲಿ ಫ್ರೆಂಡ್ಸೆಲ್ಲ ಸಂಸ್ಕೃತ ತೊಗೊಂಡರು. ಆಗ ನಮ್ಮಮ್ಮ ಹೇಳಿದರು, 'ನೀನು ಸಂಸ್ಕೃತ ತೊಗೊಂಡರೆ ಕನ್ನಡದ ಗಂಧವೇ ಇಲ್ಲದಂಗೆ ಆಗಿಬಿಡುತ್ತೆ' ಅಂತ. ಅದಕ್ಕೆ ಸೆಕೆಂಡ್ ಲ್ಯಾಂಗ್ವೇಜ್ ಕನ್ನಡ ತೊಗೊಂಡಿದ್ದೆ. ಅಲ್ಲೇ ಕನ್ನಡದ ಕ್ಲಾಸಿಕ್ಸ್ ಓದಿದ್ದು.

ಮುಂಬೈಗೆ ಬಂದ ಮೇಲೆ ಇಂಗ್ಲಿಷ್ ಪುಸ್ತಕಗಳು ಹೆಚ್ಚಾಗಿ ಸಿಗೋದು. ಅವನ್ನು ಓದೋಕೆ ಶುರುಮಾಡಿದೆ. ಮುಂಬೈನಲ್ಲಿ ಮೈಸೂರು ಅಸೋಸಿಯೇಷನ್‌ನಲ್ಲಿ ಒಳ್ಳೆಯ ಲೈಬ್ರರಿ ಇತ್ತು. ಬೆಂಗಳೂರಿಗೆ ಬಂದಾಗ ಕನ್ನಡ ಪುಸ್ತಕಗಳನ್ನು ತೊಗೊಂಡು ಹೋಗಿ ಓದ್ತಿದ್ದೆ.

◆ ಬರವಣಿಗೆ ಆರಂಭಿಸಿದ್ದು ಯಾವಾಗ?

ಮೊದಮೊದಲು ಏನು ಖುಷಿ ಕೊಡುತ್ತೋ ಅದನ್ನ ಓದುತ್ತಿದ್ದೆ. ಬರೆಯಲು ಆರಂಭಿಸಿದ್ದು ಆಮೇಲೆ. ಹಾಗಂತ ಗಂಟೆಗಟ್ಟಲೇ ಕೂತು ಎಂದೂ ಬರೆದಿದ್ದಿಲ್ಲ. ಸಮಯ ಸಿಕ್ಕಾಗ, ಬರೀಬೇಕು ಅನ್ನಿಸಿದಾಗ ಬರೀತಿದ್ದೆ.

ಬರವಣಿಗೆ ಶುರುಮಾಡಿದ್ದು ಮುಂಬೈನಲ್ಲಿಯೇ. ಪಿಯುಸಿಯಲ್ಲಿದ್ದಾಗ ಒಂದು ಸಲ ಯಾರಿಗೂ ಗೊತ್ತಾಗಬಾರದೂಂತ 'ಕಲ್ಪನ' ಅಂತ ಕಾವ್ಯನಾಮದಲ್ಲಿ ಕತೆ ಬರೆದಿದ್ದೆ. ಆ ಕತೆ ಆಗ ತುಮಕೂರಿನಲ್ಲಿ ಪ್ರಕಟವಾಗುತ್ತಿದ್ದ 'ವಿಜಯವಾಣಿ' ಅನ್ನೋ ಪತ್ರಿಕೆಯಲ್ಲಿ ಪ್ರಕಟವಾಯಿತು. ಆಮೇಲೆ ಮತ್ತೆ ಬರೆಯೋಕೆ ಹೋಗಲಿಲ್ಲ. ಮುಂಬೈಗೆ ಹೋದಮೇಲೆ ಬರೆಯೋಕೆ ಶುರುಮಾಡಿದೆ. ಮೊದಲು ಬರೆದದ್ದು 'ಸುಧಾ' ವಾರಪತ್ರಿಕೆಗೆ. ಆಮೇಲೆ 'ಪ್ರಜಾವಾಣಿ', 'ಮಯೂರ', 'ವನಿತಾ', 'ಕಸ್ತೂರಿ', 'ಲಂಕೇಶ್ ಪತ್ರಿಕೆ'ಗಳಲ್ಲಿ ಕತೆಗಳು ಪ್ರಕಟವಾದವು. ಮೊದಲು ಕತೆಗಳಿಂದಲೇ ಬರವಣಿಗೆ

'ನಾನು ಬೆಳೆದುಬಂದಿದ್ದ ಜಗತ್ತು ಬಹಳ innocent ಆಗಿ simple ಆಗಿತ್ತು. ಮುಂಬೈ ಜಗತ್ತು ಹೊಸದು. ಅದು ನನ್ನಲ್ಲಿ ಹೊಸ ಆಲೋಚನೆಗಳನ್ನು ಹುಟ್ಟುಹಾಕಿ, ಕ್ರಿಯೇಟಿವಿಟಿಯನ್ನ ಹೊರಹೊಮ್ಮುವಂತೆ ಮಾಡೋದು. ಮುಂಬೈ ಆದೊಂದು ತರಹ very liberating ಜಾಗ. ಅಲ್ಲಿ ನೀವು gender consicious ಆಗಿರಲ್ಲ. ಹಾಗಾಗಿ, ಅದು ನನ್ನ ಬರವಣಿಗೆಯಲ್ಲೂ ಬಂತು...'

